ಅಂಗಳದಲ್ಲಿ ಕೂದಲನ್ನು ಬಾಚಿಕೊಳ್ಳುತ್ತ ಕುಳಿತಿದ್ದಳು. ಕೂದಲ ಸಮೃದ್ಧಿ ಇಬ್ಬರು ಹೆಂಗಸರಿಗೂ. ಕೂದಲನ್ನು ಮುಖದಮೇಲೆ ತಂದು, ಮುಂಬಾಗಿ ಮರದ ಬಾಚಣಿಗೆಯಲ್ಲಿ ಎಳೆಯುತ್ತಿದ್ದಳು. ಕೆಳಗೆ ಬೀಳುವ ಹೇನುಗಳನ್ನು ಉಗುರಲ್ಲಿ ಕೊಲ್ಲುತ್ತಿದ್ದಳು. ಅವಳು ಹೊರಗೆ ಹೋಗುವಾಗ ಶರ್ಟಿನಂತಹ ಕುಪ್ಪಾಯ ಹಾಕುತ್ತಾಳೆ; ಇಲ್ಲಿರುವಾಗ ಎದೆವಸ್ತ್ರ. ಚಾಂಬನ್ ಎಲ್ಲೆಡೆ ಒಂದೆ; ಬೆತ್ತಲೆ ಎದೆ. ಸಂಜೆ ಹಳ್ಳದತ್ತ ಹೋಗಿದ್ದ. ಯಾರೋ ಇರುವಂತೆ ಭಾಸವಾಯಿತು. ಚೆಂಗುಟ್ಟಿ ನೀರಲ್ಲಿ ಕುಳಿತಿದ್ದಳು. ಎಂತದೊ ಸೊಪ್ಪಿನ ಲೋಳೆಯನ್ನು ತಲೆಗೂದಲಿಗೆ ಹಾಕಿ ಗಸಗಸ ತಿಕ್ಕಿಕೊಳ್ಳುತ್ತಿದ್ದಳು. ಅವಳ ಎದೆ ಬೆತ್ತಲೆಯಾಗಿತ್ತು. ಜೋಡಿ ಬಾಳೆಕುಂಡಿಗೆಗಳಂತೆ ಶಾಮಲವರ್ಣದಲ್ಲಿದ್ದವು. ಚರ್ಮದ ಬಿಗು ಆರೋಗ್ಯವನ್ನು ಸೂಸುತ್ತಿತ್ತು. ಇವನನ್ನು ಅಚ್ಚರಿಯಲ್ಲಿ ನೋಡಿ, 'ಸ್ನಾನಕ್ಕೆ ಬಂದ್ಯಾ' ಅಂತ ಕೇಳಿದಳು. ಮಾರನೆ ಮುಸ್ಸಂಜೆ ಯಜಮಾನ ಎಲ್ಲರನ್ನು ಕರೆದ. ಆತ ಅವನ ಹೆಂಡತಿ, ಚೆಂಗುಟ್ಟಿ, ಹಿಂದೆ ತಾನು. ಎಷ್ಟೋಬಾರಿ ಚೆಂಗುಟ್ಟಿಯೊಂದಿಗೆ ಬಂದ ಜಾಗವೆ. ನಿನ್ನೆ ಹಳ್ಳದಲ್ಲಿ ಕಂಡದ್ದು ನೆನಪಾಯಿತು. ಕೊಳಕಾದ ಮುಂಡಿನಲ್ಲಿಯು ಅವಳ ನಿತಂಬದ ಲಯವನ್ನು ಮೊದಲಬಾರಿ ಗುರುತಿಸಿದ. ಕೈಯಲ್ಲಿ ದೊಡ್ಡ ಅಲ್ಯುಮಿನಿಯಂ ಬೋಗುಣಿ ಹಿಡಿದಿದ್ದಳು. ಒಂದು ಮರದಡಿಗೆ ನಿತ್ತ

